**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಜೇವರ್ಗಿ**

**ಸಿಸಿ ನಂ.200/2024**

| | | |
|---|---|---|
| ಪಿರ್ಯಾದುದಾರಃ | 1. | ಕರ್ನಾಟಕ ಸರ್ಕಾರದ ಪರ ಜೇವರ್ಗಿ ಪೋಲಿಸರು |
| | | **ವಿರುದ್ಧ** |
| ಆರೋಪಿತರು | 1. | ಸುನೀಲ @ ಅನೀಲ ತಂದೆ ಶಿವಲಿಂಗಪ್ಪ ನಾಯ್ಕೋಡಿ,<br>ವಯಸ್ಸುಃ 21 ವರ್ಷ, ಉಃ ಕೂಲಿ ಕೆಲಸ, |
| | 2. | ರಾಜು @ ಧರ್ಮರಾಜ ತಂದೆ ಮಲ್ಲಣ್ಣ ನಾಯ್ಕೋಡಿ,<br>ವಯಸ್ಸುಃ 28 ವರ್ಷ, ಉಃ ಕೂಲಿ ಕೆಲಸ, |
| | 3. | ಮಹಾಂತೇಶ ತಂದೆ ಶರಣಪ್ಪ ಹುಗ್ಗಿ,<br>ವಯಸ್ಸುಃ 25 ವರ್ಷ, ಉಃ ಹೋಟೆಲ್ ಕೆಲಸ, |
| | 4. | ಮಲ್ಲಿಕಾರ್ಜುನ ತಂದೆ ಸುಬಾ ಹನ್ನೂರ,<br>ವಯಸ್ಸುಃ 21 ವರ್ಷ, ಉಃ ಕೂಲಿ ಕೆಲಸ, |
| | 5. | ಸಿದ್ದು ತಂದೆ ಅಣ್ಣಪ್ಪ ಹನ್ನೂರ,<br>ವಯಸ್ಸುಃ 20 ವರ್ಷ, ಉಃ ಕೂಲಿ ಕೆಲಸ, |
| | 6. | ಶರಣು ತಂದೆ ಯಮನಪ್ಪ ಹನ್ನೂರ,<br>ವಯಸ್ಸುಃ 30 ವರ್ಷ, ಉಃ ಕೂಲಿ ಕೆಲಸ, |
| | 8. | ಜೀತು ತಂದೆ ಧರ್ಮು ಚವಾಣ,<br>ವಯಸ್ಸುಃ 26 ವರ್ಷ, ಉಃ ಆಟೋ ಚಾಲಕ, |
| | 9. | ಜಾನು ತಂದೆ ತಿರುಪತಿ ಚವಾಣ,<br>ವಯಸ್ಸುಃ 25 ವರ್ಷ, ಉಃ ಕೂಲಿ ಕೆಲಸ, |
| | 10. | ಸುನೀಲ ತಂದೆ ಬದ್ದು ರಾಠೋಡ,<br>ವಯಸ್ಸುಃ 26 ವರ್ಷ, ಉಃ ಕೂಲಿ ಕೆಲಸ, |
| | 11. | ಸಂತೋಷ ತಂದೆ ತೇಜು ರಾಠೋಡ,<br>ವಯಸ್ಸುಃ 24 ವರ್ಷ, ಉಃ ಕೂಲಿ ಕೆಲಸ, |
| | | ಎಲ್ಲಾ ಆರೋಪಿತರ ವಾಸಃ ರೇವನೂರು ಗ್ರಾಮ,<br>ತಾಃ ಜೇವರ್ಗಿ, ಜಿಃ ಕಲ್ಬುರ್ಗಿ |

**<u>ಆಪಾದನೆ</u>**

ಶ್ರೀಮತಿ ತಯ್ಯಬಾ ಸುಲ್ತಾನಾ, ಬಿ.ಎ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ,

ಜೇವರ್ಗಿ ಪೋಲಿಸ ಠಾಣಾ ವ್ಯಾಪ್ತಿಯ ರೇವನೂರು ಕ್ರಾಸ್ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 50 ರೇವನೂರು ಗ್ರಾಮಕ್ಕೆ ಹೋಗುವ ತಿರುವಿನಲ್ಲಿ ಹೆದ್ದಾರಿಯ ಚೈನೇಜ್ 300+800ರ ಹೆದ್ದಾರಿ ರಸ್ತೆಯ ಮಧ್ಯದಿಂದ 8.95 ಮೀಟರದಿಂದ 14.3 ಮೀಟರ್ ಮಧ್ಯದ ಸ್ಥಳದಲ್ಲಿ 1 ರಿಂದ 3ನೇ ಆರೋಪಿತರಾದ ನೀವು ದಿನಾಂಕ 11-12-2017 ರಂದು ರಾತ್ರಿ 11.00 ಗಂಟೆಗೆ ಅಂಬಿಗರ ಚೌಡಯ್ಯ ಫ್ಲೆಕ್ಸ್ ಬೋರ್ಡನ್ನು ಹಾಗೂ ಅದೇ ದಿನಾಂಕದಂದು ರಾತ್ರಿ 11.30 ಗಂಟೆಗೆ 4 ರಿಂದ 7ನೇ ಆರೋಪಿತರಾದ ನೀವು ಸಂಗೋಳ್ಳಿ ರಾಯಣ್ಣನ ಭಾವಚಿತ್ರದ ಬಟ್ಟೆಯ ಧ್ವಜ ಕಂಬವನ್ನು ಹಾಗೂ 8 ರಿಂದ 11 ನೇ ಆರೋಪಿತರಾದ ನೀವು ಸಂತ ಸೇವಾಲಾಲ ಮಹಾರಾಜರ ಭಾವಚಿತ್ರದ ಬಟ್ಟೆಯ ಧ್ವಜದ ಕಂಬವನ್ನು ನೆಟ್ಟು ಸದರಿ ರಸ್ತೆಯಲ್ಲಿ ಹೋಗಿ ಬರುವ ಜನರು ಹಾಗೂ ವಾಹನಗಳು ಸುಗಮವಾಗಿ ಸಂಚರಿಸಲು ಅಡ್ಡಿಪಡಿಸಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 283 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿದ ಬಗ್ಗೆ ಆರೋಪಿಸಲಾಗಿದೆ?

ಸದರಿ ಆಪಾದನೆಗಳ ಬಗ್ಗೆ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಸದರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಈ ಮೇಲ್ಕಂಡ ಆರೋಪಗಳ ಬಗ್ಗೆ ವಿಚಾರಣೆಗೆ ಈ ಕೆಳಕಂಡಂತೆ ಆದೇಶಿಸುತ್ತೇನೆ.**

ಪ್ರಶ್ನೆ-1ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

1 ರಿಂದ 6 ಮತ್ತು 8 ರಿಂದ 11ನೇ ಆರೋಪಿತರ ಉತ್ತರಃ

ಪ್ರಶ್ನೆ-2ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?

1 ರಿಂದ 6 ಮತ್ತು 8 ರಿಂದ 11ನೇ ಆರೋಪಿತರ ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

(ಶ್ರೀಮತಿ ತಯ್ಯಬಾ ಸುಲ್ತಾನಾ)
ಹಿರಿಯ ಸಿವಿಲ್ ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು,
ಜೇವರ್ಗಿ

ದಿನಾಂಕಃ 13-11-2025